(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತಿರುವ ನದಿಗಳ ನೀರು ಸಮುದ್ರಕ್ಕೆ ಸೇರುತ್ತಿರುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಉಪಾಧ್ಯಕ್ಷರೇ, ಬೃಹತ್ ನೀರಾವರಿ ಸಚಿವರಿಗೆ ಸಂಬಂಧಪಟ್ಟಂತೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಅವರ ಪರವಾಗಿ ಯಾರಾದರೂ ಗಮನಿಸಿ, ಸರ್ಕಾರದಿಂದ ಸೂಕ್ತ ಉತ್ತರವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತಿರುವಂಥ ಕಾಳಿ, ಬೇಡ್ತಿ, ಅಘನಾಶಿನಿ, ಶರಾವತಿ ಇತ್ಯಾದಿ ನದಿಗಳು ಎನಿವೆಯೋ, ಈ ನದಿಗಳ ನೀರೆಲ್ಲಾ ಸಮುದ್ರವನ್ನು ಸೇರುತ್ತಾ ಇದೆ. ಇದರ ವಿನಿಯೋಗವನ್ನು ಮಾಡಿಕೊಳ್ಳುವಂಥ ಯೋಜನೆ ರಾಜ್ಯಸರ್ಕಾರದಿಂದ ರೂಪಿತವಾದರೆ, ಈ ಎಲ್ಲಾ ನೀರಿನಿಂದ ಲಕ್ಷಾಂತರ ಎಕರೆಗಳಿಗೆ, ಸಹಸ್ರಾರು ರೈತರ ಭೂಮಿಗಳಿಗೆ ನೀರನ್ನು ನಾವು ವರ್ಷಪೂರ್ಣವಾಗಿ ಕೊಡಬಹುದು. ಹಾಗಾಗಿ, ಈ ಘಟ್ಟದ ಮೇಲಿನಿಂದ, ಘಟ್ಟದ ಕೆಳಕ್ಕೆ ಹರಿಯುತ್ತಿರುವಂಥ, ವ್ಯರ್ಥವಾಗಿ ಸಮುದ್ರವನ್ನು ಸೇರುವಂಥ ನೀರನ್ನು, ಈ ಎಲ್ಲಾ ನದಿಗಳ ನೀರನ್ನು ಸದ್ಬಳಕೆ ಮಾಡುವ ದೃಷ್ಟಿಯಿಂದ ಸರ್ಕಾರ ತಕ್ಷಣದಲ್ಲಿ ತಜ್ಞರಿಂದ ಒಂದು ಸಮೀಕ್ಷೆಯನ್ನು ನಡೆಸಿ, ಸೂಕ್ತವಾದಂಥ ವರದಿಯನ್ನು ಸಿದ್ದಪಡಿಸಬೇಕು. ಆ ಮೂಲಕ, ಆ ಭಾಗದ ರೈತರಿಗೆ ವರ್ಷಪೂರ್ತಿ ಇರುವಂಥ ನೀರಿನ ಅನುಕೂಲವನ್ನು ಮಾಡಿಕೊಡಬೇಕು. ಅದಕ್ಕೆ ತಜ್ಞರ ಒಂದು ಸಮಿತಿಯನ್ನು ಮಾಡಿ, ಸಮೀಕ್ಷೆ ಮಾಡಿಸಿ ವರದಿಯನ್ನು ಸಿದ್ದಪಡಿಸುವುದಕ್ಕೆ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಪಶ್ಚಿಮಕ್ಕೆ ಹರಿಯುತ್ತಿರತಕ್ಕ ನದಿಗಳ ನೀರನ್ನು ಬಳಕೆ ಮಾಡುವ ಬಗ್ಗೆ ಸಮೀಕ್ಷೆ ಮಾಡಿಸಬೇಕೆಂದು ಮಾನ್ಯಸದಸ್ಯರು ಕೇಳುತ್ತಾ ಇದ್ದಾರೆ. ಅದಕ್ಕೆ, ಈ ವಿಚಾರವನ್ನು ಭಾರಿ ನೀರಾವರಿ ಸಚಿವರ ಗಮನಕ್ಕೆ ತಂದು, ಅಗತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಅವರಿಗೆ ತಿಳಿಸುವವನಿದ್ದೇನೆ.

(ಕ) ಸುರತ್ಕಲ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಂ.ಆರ್.ಪಿ.ಎಲ್; ಹೆಚ್.ಪಿ.ಸಿ.ಎಲ್. ಸಂಸ್ಥೆಗಳಿಗಾಗಿ ಭೂಮಿಯನ್ನು ವಶಪಡಿಸಿಕೊಂಡ ನಂತರ ಭೂಮಿ ಕಳೆದುಕೊಂಡ ನಿರಾಶ್ರಿತರಿಗೆ ಪರಿಹಾರ ನೀಡದಿರುವುದು.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಸನ್ಮಾನ್ಯ ಉಪಾಧ್ಯಕ್ಷರೇ, ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಎಂ.ಆರ್.ಪಿ.ಎಲ್, ಹೆಚ್.ಪಿ.ಸಿ.ಎಲ್. ಈ ಸಂಸ್ಥೆಗಳು ಬೃಹತ್ತಾಗಿ ಕಾರ್ಯಾಚರಣೆ ಮಾಡುತ್ತಿವೆ. ಈ ಸಂಸ್ಥೆಗೋಸ್ಕರ 1, 500 ಎಕರೆಗಿಂತ